## ದಿನಾಂಕ : 18-06-2022 ರಂದು ಬೆಳಿಗ್ಗೆ 10:30 ಗಂಟೆಗೆ ವಾರ್ಡ್-80 ರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

ವಾರ್ಡ್ ಸಂಖ್ಯೆ:-80 ಹೊಯ್ಸಳನಗರ ವಾರ್ಡ್ ಕಛೇರಿಯಲ್ಲಿ ದಿನಾಂಕ: 18-06-2022 ರಂದು ಬೆಳಿಗ್ಗೆ 10:30 ಗಂಟೆಗೆ ವಾರ್ಡ್‌ನ ನೋಡಲ್ ಅಧಿಕಾರಿಯವರಾದ ಶ್ರೀ.ಎಂ.ಲೋಕೇಶ್ ರವರ ಅಧ್ಯಕ್ಷತೆಯಲ್ಲಿ, ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲಾಗಿದ್ದು, ಈ ಕೆಳಕಂಡಂತೆ ಸದಸ್ಯರು ಮತ್ತು ಅಧಿಕಾರಿ / ನೌಕರರು ಸಭೆಯಲ್ಲಿ ಹಾಜರಾಗಿರುತ್ತಾರೆ.

ಸಭೆಗೆ ಹಾಜರಿದ್ದ ಅಧಿಕಾರಿಗಳು

1. ಶ್ರೀ.ಎಂ.ಲೋಕೇಶ್ – ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು, ವಾರ್ಡ್-80
2. ಶ್ರೀ.ಶಂಕರಪ್ಪ – ಸಹಾಯಕ ಅಭಿಯಂತರರು (ಸದಸ್ಯ ಕಾರ್ಯದರ್ಶಿ)
3. ಶ್ರೀ.ಶಶಿಕುಮಾರ್ – ಸ.ಅ(ಬಿ.ಡಬ್ಲ್ಯೂ.ಎಸ್.ಎಸ್.ಬಿ)
4. ಶ್ರೀ.ನವೀನ್.ವಿ – ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್-80
5. ಶ್ರೀ.ಗಂಗಾಧರ್ – ಕಂದಾಯ ಪರಿವೀಕ್ಷಕರು
6. ಶ್ರೀ.ಸೀನು – ಕಂದಾಯ ವಸೂಲಿಗಾರರು
7. ಶ್ರೀ.ದೇವರಾಜ – ವೀಕ್ಷಕರು (ಅರಣ್ಯ ಇಲಾಖೆ)
8. ಶ್ರೀ.ಮದು.ಎಸ್.ಎಂ – ವಾರ್ಡ್ ಮಾರ್ಷಲ್
9. ಶ್ರೀ.ರಾಜೇಂದ್ರ.ಆರ್ – ಕಂದಾಯ ಪರಿವೀಕ್ಷಕರು
10. ಶ್ರೀ.ಪ್ರಭಾಕರ್ – ಕಿರಿಯ ಅಭಿಯಂತರರು (ಬೆಸ್ಕಾಂ)
11. ಶ್ರೀಮತಿ.ವಿಮಲ.ಎಸ್ – ಜೂ.ಹೆಚ್.ಎ.ಎಂ
12. ಶ್ರೀ.ಪ್ರಮೋದ್ ಕುಮಾರ್.ಟಿ – ಜೂ.ಹೆಚ್.ಎ.ಎಂ
13. ಶ್ರೀ.ಹಕ್ಯೂನ್ ರಾಜಾ – ಎ.ಎಸ್.ಐ (ಹಲಸೂರು ಪೊಲೀಸ್ ಠಾಣೆ)

ಸಭೆಗೆ ಹಾಜರಿದ್ದ ಸದಸ್ಯರು

1. ಶ್ರೀ.ಕುಲಕರ್ಣಿ – ಸದಸ್ಯರು,
2. ಶ್ರೀ.ಸತೀಶ್ ರಾವ್ – ಸದಸ್ಯರು,
3. ಶ್ರೀ.ರಾಮನ್.ಎನ್.ಆರ್ – ಸ್ಥಳೀಯ ನಿವಾಸಿಗಳು,
4. ಶ್ರೀ.ಹರೀಶ್.ಆರ್ – ಸದಸ್ಯರು,
5. ಶ್ರೀ.ಎಲ್.ಮಹೇಶ್ – ಸದಸ್ಯರು,
6. ಶ್ರೀ.ಆರ್.ಲೋಕೇಶ್ – ಸದಸ್ಯರು,
7. ಶ್ರೀ.ಎಸ್.ಪದ್ಮನಾಭನ್ – ಸ್ಥಳೀಯ ನಿವಾಸಿಗಳು,

ಪ್ರಥಮವಾಗಿ ವಾರ್ಡ್ ಕಾರ್ಯದರ್ಶಿಗಳು ಹಾಗೂ ಸಂಚಾಲಕರು ಆದ ಶ್ರೀ.ಶಂಕರಪ್ಪ, ಸಹಾಯಕ ಅಭಿಯಂತರರು ಸದರಿ ಸಭೆಗೆ ಹಾಜರಾಗಿರುವ ಎಲ್ಲಾ ಅಧಿಕಾರಿಗಳು, ಸದಸ್ಯರು ಮತ್ತು ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಿದರು. ಹಿಂದಿನ ಸಭೆಯ ನಡವಳಿಗಳ ಕುರಿತು ತೆಗೆದುಕೊಂಡ ಕ್ರಮಗಳ ಬಗ್ಗೆ ಪ್ರಸ್ತಾಪಿಸಿ ಬಾಕಿ ಇರುವ ದೂರುಗಳಿಗೆ ಸಂಬಂದಿಸಿದಂತೆ ಕ್ರಮ ವಹಿಸಲಾಗುವುದೆಂದು ತಿಳಿಸಿ ಸಭೆಯನ್ನು ಪ್ರಾರಂಭಿಸಿದರು.

- ಮೊದಲನೇದಾಗಿ ಹಿಂದಿನ ಸಭೆಯಲ್ಲಿ ಚರ್ಚಿಸಲಾದ ಕಾಮಗಾರಿ ಇಲಾಖೆಗೆ ಸಂಬಂಧಿಸಿದ ಸಮಸ್ಯಗಳ ಬಗ್ಗೆ ಪರಿಹಾರಿಸಿರುವ ವಿವರಗಳನ್ನು ಸಹಾಯಕ ಅಭಿಯಂತರರು ವಿವರಿಸಿದರು.
    - 6ನೇ ಎ ಮತ್ತು ಬಿ ಮುಖ್ಯರಸ್ತೆ ಇಂದಿರಾನಗರ 2ನೇ ಹಂತ, ಇಲ್ಲಿ ಚರಂಡಿಯಲ್ಲಿನ ಹೂಳು ತೆಗೆದು ರಸ್ತೆಗೆ ಡಾಂಬರೀಕರಣ ಮಾಡಲು,
    - ಜೈನ್ ಕಾಲೇಜ್ ಸುತ್ತ ಮುತ್ತಲಿನ ಪ್ರದೇಶಗಳಲ್ಲಿರುವ ಅಡ್ಡರಸ್ತೆಗಳಲ್ಲಿ ಕೋರಲಾಗಿದೆ. ಅದರಂತೆ ಕಾಮಗಾರಿಯು ಈ ತಿಂಗಳ ಕೊನೆಯ ಹಂತದಲ್ಲಿ ಮುಕ್ತಾಯಗೊಳಿಸಲಾಗುವುದೆಂದು ಸಭೆಯಲ್ಲಿ ತಿಳಿಸಲಾಯಿತು.

(ಕ್ರಮ:- ಬಿ.ಬಿ.ಎಂ.ಪಿ ಸಹಾಯಕ ಅಭಿಯಂತರರು ವಾರ್ಡ್-80)

- ಬೆಸ್ಕಾಂ ವತಿಯಿಂದ ಮೆಡ್‌ಪ್ಲಸ್ ಎದುರು, 6ನೇ ಕ್ರಾಸ್, 5ನೇ ಮೇನ್ 5ನೇ ಕ್ರಾಸ್, ಮತ್ತಿತರ ಕಡೆಗಳಲ್ಲಿ ಕೇಬ್ ಅಳವಡಿಸಲು ಗುಂಡಿಗಳನ್ನು ಅಗೆದಿದ್ದು, ಅಲ್ಲಿನ ಮಣ್ಣನ್ನು ಹಾಗೇ ಬಿಟ್ಟಿದ್ದು, ಕೂಡಲೇ ಡೆಬ್ರಿಸ್ ತೆರವುಗೊಳಿಸಲು ಸಭೆಯಲ್ಲಿ ತಿಳಿಸಲಾಯಿತು.
  (ಕ್ರಮ:- ಬೆಸ್ಕಾಂ ಇಲಾಖೆ)

- 9ನೇ, 12ನೇ ಕ್ರಾಸ್ ಜೊಸೆಪ್ ಕ್ಲಿನಿಕ್ ಹತ್ತಿರ ಹಾಗೂ 16ನೇ ಕ್ರಾಸ್ ಲಕ್ಷ್ಮೀಪುರ ಸ್ಥಳಗಳಲ್ಲಿ ನೀರು ಲೀಕ್ ಆಗುತ್ತಿದ್ದು, ಕೂಡಲೇ ಬಿಡಬ್ಲ್ಯೂಎಸ್‌ಎಸ್‌ಬಿ ವತಿಯಿಂದ ಕ್ರಮವಹಿಸಲು ಕೋರಲಾಯಿತು.
  (ಕ್ರಮ:- ಬಿಡಬ್ಲ್ಯೂಎಸ್‌ಎಸ್‌ಬಿ ಇಲಾಖೆ)

- 6ನೇ ಮುಖ್ಯರಸ್ತೆ ಡಿಫೆನ್ಸ್ ಕಾಲೊನಿಯ ಪ್ರಾರಂಭದಲ್ಲಿ ಟ್ರಾಫಿಕ್ ಸಮಸ್ಯೆ ಉಂಟಾಗುತ್ತಿದ್ದು, ಕೂಡಲೇ ಸಂಬಂಧಪಟ್ಟ ಇಲಾಖೆಯವರು ಕ್ರಮವಹಿಸಲು ತಿಳಿಸಲಾಯಿತು.
  (ಕ್ರಮ:- ಸಂಚಾರ ಪೊಲೀಸ್ ಠಾಣೆ)

- ಬಿಡಿಎ ಕಾಂಪ್ಲೆಕ್ಸ್ ಹಿಂಭಾಗ ಗಾಂಜಾ ಸೇವನೆಯ ಚಟುವಟಿಕೆಗಳು ನಡೆಯುತ್ತಿದ್ದು, ಕೂಡಲೇ ಬೀಟ್ ಪೊಲೀಸ್‌ರವರು ಕ್ರಮವಹಿಸಲು ಕೋರಲಾಯಿತು.
  (ಕ್ರಮ:- ಪೊಲೀಸ್ ಇಲಾಖೆ, ಕಾನೂನು ಸುವ್ಯವಸ್ಥೆ)

- 17ನೇ ಬಿ ಕ್ರಾಸ್, ಕೃಷ್ಣ ಟೆಂಪಲ್ ರಸ್ತೆ, ಸಿ.ಎಂ.ಹೆಚ್ ರಸ್ತೆ ಮತ್ತಿತರೆ ವಾರ್ಡ್ ವ್ಯಾಪ್ತಿಯಲ್ಲಿ ಬೀಳುವ ಹಂತದಲ್ಲಿರುವ ಮರದ ರೆಂಬೆ ಕೊಂಬೆಗಳನ್ನು ಕತ್ತರಿಸಲು ಅರಣ್ಯ ಇಲಾಖೆಯವರಿಗೆ ಸೂಚಿಸಲಾಯಿತು. ಅದರಂತೆ ಕೂಡಲೇ ಕ್ರಮವಹಿಸಲಾಗುತ್ತಿರುವುದಾಗಿ ಅರಣ್ಯ ಇಲಾಖೆಯ ಸಿಬ್ಬಂಧಿಯಾದ ದೇವರಾಜ್‌ರವರು ತಿಳಿಸಿದರು.
  (ಕ್ರಮ:- ಅರಣ್ಯ ಇಲಾಖೆ)

- ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳ ನಿರ್ವಹಣೆ ಹಾಗೂ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳು ಸಭೆಯಲ್ಲಿ ಕೋರಲಾಯಿತು.
  (ಕ್ರಮ:- ಬಿ.ಬಿ.ಎಂ.ಪಿ ಸಹಾಯಕ ಅಭಿಯಂತರರು ವಿದ್ಯುತ್)

- ವಾರ್ಡ್ ವ್ಯಾಪ್ತಿಯಲ್ಲಿ ಮಾಸ್ಕ್ ಧರಿಸದವರಿಗೆ ಕಡ್ಡಾಯವಾಗಿ ಧರಿಸಲು ಸೂಚಿಸಿ ಹಾಗೂ ದಂಡ ವಿಧಿಸಲು ಮಾರ್ಷಲ್‌ಗಳು ಕ್ರಮ ಕೈಗೊಳ್ಳಬೇಕೆಂದು ಸಭೆಯಲ್ಲಿ ತಿಳಿಸಲಾಯಿತು. ಹಾಗೂ ಬೂಸ್ಟರ್ ಡೋಸ್ ನೀಡುವ ಬಗ್ಗೆ ಸಂಬಂಧಪಟ್ಟವರು ಕ್ರಮವಹಿಸಲು ಸಭೆಯಲ್ಲಿ ಕೋರಲಾಯಿತು.
  (ಕ್ರಮ:- ಆರೋಗ್ಯ ಇಲಾಖೆ)

- ಸಿ.ಎಂ.ಹೆಚ್ ರಸ್ತೆ 17ನೇ ಸಿ ಕ್ರಾಸ್‌ನಲ್ಲಿ ಡಕ್ಟ್ ಕವರ್ ಕಿತ್ತು ಹೋಗಿದ್ದು ಇದರಿಂದ ವಾಹನಗಳ ಓಡಾಟಕ್ಕೆ ಅನಾನುಕೂಲವಾಗಿದ್ದು, ಹಾಗೂ ಶಬ್ಧ ಉಂಟಾಗುತ್ತಿದ್ದು, ಕೂಡಲೇ ಸರಿಪಡಿಸಲು ಕೋರಿದರು. ಹಾಗೂ 6ನೇ ಮುಖ್ಯರಸ್ತೆ, 80 ಅಡಿರಸ್ತೆ ರಸ್ತೆ ವಿಭಜಕವನ್ನು ಬಿಎಸ್‌ಎನ್‌ಎಲ್ ವೃತ್ತದವರೆಗೂ ವಿಸ್ತರಿಸಲು ಹಾಗೂ ರಂಬ್ಲರ್ಸ್‌ಗಳನ್ನು ಅಳವಡಿಸಲು ಕೋರಲಾಯಿತು.
  (ಕ್ರಮ:- ಕೇಂದ್ರ ಯೋಜನೆ ಇಂಜಿನಿಯರಿಂಗ್ ವಿಭಾಗ)

ಮೇಲ್ಕಂಡಂತೆ ಚರ್ಚಿಸಲಾಗಿರುವ ಎಲ್ಲಾ ಕುಂದುಕೊರತೆಗಳ ಬಗ್ಗೆ ಸಂಬಂಧಪಟ್ಟ ಆಯಾ ಇಲಾಖೆಯ ಅಧಿಕಾರಿಗಳಿಗೆ ಕೂಡಲೇ ಕ್ರಮವಹಿಸಲು ಹಾಗೂ ಕ್ರಮ ವಹಿಸಿರುವ ಬಗ್ಗೆ ತಿಳಿಸಿ ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

18.6.2022
ಕಾರ್ಯದರ್ಶಿಗಳು
ವಾರ್ಡ್ ಸಮಿತಿ-80

ಅಧ್ಯಕ್ಷರು
ವಾರ್ಡ್ ಸಮಿತಿ, ವಾರ್ಡ್ 80
ಹಾಗೂ ನೋಡಲ್ ಅಧಿಕಾರಿಗಳು,
ವಾರ್ಡ್ 80